ಇದರ ಬಗ್ಗೆ ಆಡ್ಮಿಶನ್ ಸ್ಟೇಜ್‌ನಲ್ಲಿಯೇ ಇತ್ಯರ್ಥಮಾಡಿಕೊಂಡು ರಿಜಿಸ್ಟ್ರೇ ಮಾಡಬೇಕಾಗುತ್ತದೆ. ಆದರೆ ನೀವು ಎಂಟರ್‌ಟೈನ್ ಮಾಡಿರುವುದು ಹೇಗಿದೆಯೋ ನನಗೆ ಗೊತ್ತಿಲ್ಲ. ಒಂದು ವೇಳೆ ಪರಿಶಿಷ್ಟ ಜಾತಿಯವರಿಗೆ ಆಸೆ ಆಕಾಂಕ್ಷೆಗಳನ್ನು ಒಡ್ಡಿ ಅವರಿಗೆ 2 ರಿಂದ 5 ಸಾವಿರ ರೂಪಾಯಿಗಳನ್ನು ಕೊಟ್ಟು ಜಮೀನನ್ನು ಕೊಂಡುಕೊಂಡಿದ್ದೇ ಆದರೆ ಅದು ಅನ್ಯಾಯವಾಗುತ್ತದೆಯಲ್ಲದೆ ಕಾನೂನುಬಾಹಿರವೂ ಆಗುತ್ತದೆ. ಆದುದರಿಂದ ಇದರ ಬಗ್ಗೆ ಗಮನಹರಿಸಬೇಕು. ಇದರ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕು. ನಿಜವಾಗಿಯೂ ಅದು ಪರಿಶಿಷ್ಟಜಾತಿ ಪರಿಶಿಷ್ಟಪಂಗಡದವರ ಜಮೀನು ಆಗಿದ್ದರೆ ಅದನ್ನು ಕೊಂಡುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :— ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆ ಒಳ್ಳೆಯದು. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ವತಿಯಿಂದ ಏನು ಮಾಡುತ್ತೇವೆಂದರೆ, ಪ್ರೈವೇಟ್ ಇನ್‌ವೆಸ್ಟರ್ಸ್ ಯಾರಾದರೂ ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ನಾವು ಎನ್‌ಕರೇಜ್ ಮಾಡುತ್ತೇವೆ. ಸಿಂಗಲ್ ವಿಂಡೋ ಏಜೆನ್ಸಿಗಳ ಮುಂದೆ ಬಂದಾಗ ನೋಡಿ ನೀವು ಇಂಥಿಂಥ ಪರ್ಮಿಷನ್ಸ್ ತೆಗೆದುಕೊಂಡು ಬಂದರೆ ಮಾಡುತ್ತೇವೆಂದು ಹೇಳಿದ್ದೇವೆ. ಜಮೀನಿಗೆ ಸಂಬಂಧಪಟ್ಟಹಾಗೆ ಖಾತೆ, ಆರ್‌ಟಿಸಿ, ಸರ್ವೆ ನಂಬರ್ಸ್ ಎಲ್ಲಾ ತೆಗೆದುಕೊಂಡು ಬನ್ನಿ. ಆಮೇಲೆ ಅಲ್ಲಿ ರೆಸ್ಟಾಟ್ಸ್ ಮಾಡಬೇಕಾದರೆ ಪರಿಸರ ಇಲಾಖೆ, ಅರಣ್ಯ ಇಲಾಖೆಯಿಂದ ಪರ್ಮಿಷನ್ ತೆಗೆದುಕೊಂಡು ಬಂದರೆ ನಾವು ಪರ್ಮಿಷನ್ ಕೊಡುತ್ತೇವೆಂದು ಹೇಳಿದ್ದೇವೆ. ಮಾನ್ಯ ಸೋಮಶೇಖರ್‌ರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಪರ್ಮಿಷನ್ ಕೊಡಬೇಕಾದರೆ ಅದೆಲ್ಲವನ್ನೂ ನೋಡಿ ಕೊಡುತ್ತೇವೆ.

ಅಧ್ಯಕ್ಷರು :— ಮುಂದಿನ ಪ್ರಶ್ನೆ ಮಾನ್ಯ ಚೌಡರೆಡ್ಡಿಯವರು ಗೈರುಹಾಜರಿದ್ದಾರೆ. ಮುಂದಿನ ಪ್ರಶ್ನೆ ಗೋಪಾಲ ಭಂಡಾರಿ.

ತಾಲ್ಲೂಕ ಕೇಂದ್ರಗಳಲ್ಲಿ ಯುವಜನ ಸೇವಾ ಅಧಿಕಾರಿ ಹುದ್ದೆಗಳ ಭರ್ತಿ

251(2699) ಶ್ರೀ ಗೋಪಾಲ್ ಭಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕೇಂದ್ರಗಳಲ್ಲಿ ಯುವಜನ ಸೇವಾ ಅಧಿಕಾರಿಗಳನ್ನು ಭರ್ತಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಅ) ಎಷ್ಟು ತಾಲ್ಲೂಕುಗಳಲ್ಲಿ ತಾಲ್ಲೂಕು ಯುವಜನ ಸೇವಾಧಿಕಾರಿಗಳು ಇಲ್ಲ? (ವಿವರ ಒದಗಿಸುವುದು)

ಆ) ತಾಲ್ಲೂಕು ಮಟ್ಟದಲ್ಲಿರುವ ಕ್ರೀಡಾಂಗಣಗಳಲ್ಲಿ ಕ್ರೀಡಾ ತರಬೇತುದಾರರನ್ನು ನೇಮಿಸಲು ಸಾಧ್ಯವೇ?

ಶ್ರೀ ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರ ಪರವಾಗಿ) :—

ಅ) ತಾಲ್ಲೂಕು ಮಟ್ಟದಲ್ಲಿ ಮಂಜೂರಾದ ಯುವಜನ ಸೇವಾ ಹಾಗೂ ಕ್ರೀಡಾ ಅಧಿಕಾರಿಗಳ ಹುದ್ದೆಗಳು ಇರುವುದಿಲ್ಲ. ಆದರೂ ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಪಂಚಾಯತ್ ಮುಖಾಂತರ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, ಇವರ ವೇತನವನ್ನು ಅವರ ಮಾತೃ ಇಲಾಖೆಯೇ ಭರಿಸುತ್ತದೆ.

ಆ) ರಾಜ್ಯದಲ್ಲಿ 11 ತಾಲ್ಲೂಕುಗಳಲ್ಲಿ ಮಾತ್ರ ಎನ್‌ಡಿಎನ್ ಇನ್ಸ್‌ಟ್ರಕ್ಟರ್‌ಗಳು ತಾಲ್ಲೂಕು ಯುವಜನ ಸೇವಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು, 164 ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳಿರುವುದಿಲ್ಲ. (ವಿವರಗಳು ಲಗತ್ತಿಸಲಾಗಿದೆ)

ಇ) ಪ್ರತಿ ತಾಲ್ಲೂಕಿಗೆ ಒಬ್ಬರಂತೆ 175 ಕ್ರೀಡಾ ತರಬೇತುದಾರರನ್ನು ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಇದುವರೆಗೆ 114 ಮಂದಿ ತರಬೇತುದಾರರನ್ನು ನೇಮಕ ಮಾಡಲಾಗಿದೆ. ಉಳಿದ 61 ತಾಲ್ಲೂಕುಗಳಲ್ಲಿ ಕ್ರೀಡಾ ತರಬೇತಿದಾರರನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ 2699 ಅನುಬಂಧ

ಈ ಕೆಳಕಂಡ ತಾಲ್ಲೂಕುಗಳಲ್ಲಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

೧) ಬೆಂಗಳೂರು ದಕ್ಷಿಣ
೨) ಬೆಂಗಳೂರು ಉತ್ತರ
೩) ಆನೇಕಲ್
೪) ಪಿರಿಯಪಟ್ಟಣ
೫) ಬೆಳಗಾಂ
೬) ದಾವಣಗೆರೆ
೭) ಮಡಕೇರಿ
೮) ಕಾರವಾರ
೯) ಹೊಸಕೋಟೆ
೧೦) ವಿರಾಜಪೇಟೆ

ಶ್ರೀ ಹೆಚ್. ಗೋಪಾಲ ಭಂಡಾರಿ :— ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿ ಯುವಜನ ಸೇವಾ ಅಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಎಷ್ಟು ತಾಲ್ಲೂಕುಗಳಲ್ಲಿ ತಾಲ್ಲೂಕು ಯುವಜನ ಸೇವಾ ಅಧಿಕಾರಿಗಳು ಇದ್ದಾರೆಂದು ಪ್ರಶ್ನೆ ಕೇಳಿದಾಗ, ನಮ್ಮ ರಾಜ್ಯದಲ್ಲಿ 11 ತಾಲ್ಲೂಕುಗಳಲ್ಲಿ ಯುವಜನ ಸೇವಾಧಿಕಾರಿಗಳು ಇದ್ದಾರೆಂದು ಹೇಳಿದ್ದಾರೆ. ಅದರ ಜೊತೆಗೆ ನಮ್ಮ ತಾಲ್ಲೂಕುಮಟ್ಟದಲ್ಲಿ ಕ್ರೀಡಾಂಗಣಗಳನ್ನು ಕಟ್ಟಿ ತರಬೇತಿಯನ್ನು ಕೊಡಲಿಕ್ಕೆ ಎಷ್ಟು ವ್ಯವಸ್ಥೆ ಇದೆಯೆಂದು ಹೇಳಿದಾಗ, 135 ಕ್ರೀಡಾಪಟುಗಳಿಗೆ ಯುವಕರಿಗೆ ತರಬೇತಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅಧಿಕಾರಿಗಳು ಇಲ್ಲ. ಹಿಂದೆ ಇದ್ದ ಎನ್‌ಡಿಎ ಇನ್‌ಸ್ಟ್ರಕ್ಟರ್‌ಗಳು ನಿವೃತ್ತಿಯಾದ ನಂತರ ಆ ಹುದ್ದೆಯನ್ನು ತುಂಬತಕ್ಕ ಪ್ರಯತ್ನವಿಷ್ಟರತನಕ ಆಗಲಿಲ್ಲ. ಯುವಜನರನ್ನು ಪ್ರೋತ್ಸಾಹಿಸಲಿಕ್ಕೆ ಅವರನ್ನು ನಮ್ಮ ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಕೊಂಡೊಯ್ಯಲಿಕ್ಕೆ, ಜವಾಬ್ದಾರಿಯುತ ಚಟುವಟಿಕೆಗಳಲ್ಲಿ ಪೂರಕವಾಗಿ ತೊಡಗಿಸಲಿಕ್ಕೆ ಪ್ರೋತ್ಸಾಹ ಕೊಡತಕ್ಕ ಯುವಜನ ಸೇವಾ ಅಧಿಕಾರಿಗಳು ತಾಲ್ಲೂಕುಮಟ್ಟದಲ್ಲಿದ್ದಾಗ ಹೆಚ್ಚು ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ಹುದ್ದೆಗಳನ್ನು ತುಂಬತಕ್ಕ ಪ್ರಕ್ರಿಯೆಗೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಳ್ಳತಕ್ಕದ್ದು ಬಹಳ ಸೂಕ್ತವೆಂದು ನನ್ನ ಅನಿಸಿಕೆ. ಅದರ ಜೊತೆಗೆ ಏನು ಕೋಚ್‌ಗಳು : ತರಬೇತುದಾರರು ಇದ್ದಾರೆ, ಆ ತರಬೇತುದಾರರನ್ನು ಸ್ವಲ್ಪ ಮಟ್ಟಿಗೆ ತುಂಬಿದ್ದಾರೆ. ಆದರೆ ಎಲ್ಲಿ ತಾಲ್ಲೂಕುಮಟ್ಟದಲ್ಲಿ ಕ್ರೀಡಾಂಗಣ ಇದೆ, ಅಲ್ಲಿ ಆ ಹುದ್ದೆಗಳನ್ನು ತುಂಬತಕ್ಕ ಪ್ರಕ್ರಿಯೆಯನ್ನು ಮಾಡಿದರೆ ಬಹಳ ಒಳ್ಳೆಯದು. ನಮ್ಮ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನಲ್ಲಿ ತಾಲ್ಲೂಕುಮಟ್ಟದ ಕ್ರೀಡಾಂಗಣವಿದೆ.

ಅಧ್ಯಕ್ಷರು :— ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿಲ್ಲ. ಭಾಷಣ ಮಾಡುತ್ತಿದ್ದೀರಿ.

ಶ್ರೀ ಹೆಚ್. ಗೋಪಾಲ ಭಂಡಾರಿ :— ಎಲ್ಲಿ ಕ್ರೀಡಾಂಗಣ ಇದೆ ಅಲ್ಲಿ ತರಬೇತುದಾರರನ್ನು ತುಂಬತಕ್ಕ ಕೆಲಸವನ್ನು ಮಾಡುತ್ತಾರೆಯೇ? ಈ ನಿಟ್ಟಿನಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆನ್ನುವುದು ನನ್ನ ಪ್ರಶ್ನೆ.

ಶ್ರೀ ರಮಾನಾಥ ರೈ (ಬಂದರು ಮೀನುಗಾರಿಕೆ ಸಚಿವರು) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರವನ್ನು ಕೊಟ್ಟ ಪ್ರಕಾರ, ತಾಲ್ಲೂಕುಮಟ್ಟದ ಅಧಿಕಾರಿಗಳು ಇಲ್ಲವೆನ್ನುವುದನ್ನು ಈಗಾಗಲೇ ಉತ್ತರದಲ್ಲಿ ಕೊಡಲಾಗಿದೆ. ಆದರೆ ನ್ಯಾಷನಲ್ ಡಿಸಿಪ್ಲಿನ್ ಸ್ಕೀಮ್ ಎನ್ನುವ ಕಾರ್ಯಕ್ರಮದಡಿಯಲ್ಲಿ ಅನೇಕ ಜನ ಅನೇಕ ತಾಲ್ಲೂಕುಗಳಲ್ಲಿ ಕೆಲಸಮಾಡುತ್ತಿದ್ದಾರೆಂದು ಮಾನ್ಯಸದಸ್ಯರು ಹೇಳಿದರು. ಎಸ್‌ಡಿಎಸ್ ಸ್ಕೀಮ್‌ನಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸಂಬಳವನ್ನು ಕೇಂದ್ರಸರ್ಕಾರದ ಕಡೆಯಿಂದ ಕೊಡುವಂತಹದ್ದು ಆಗಿದೆ. ಅವರು ನಿವೃತ್ತಿಯಾದ ಮೇಲೆ ಹೊಸ ನೇಮಕಾತಿ ಆಗಲಿಲ್ಲ. ಈಗ 11 ಜನ ಮಾತ್ರ ಉಳಿದುಕೊಂಡಿದ್ದಾರೆ. ಉಳಿದವರು ನಿವೃತ್ತಿಯಾಗಿದ್ದಾರೆ. ಹಾಗಾಗಿ ಪ್ರತಿ ತಾಲ್ಲೂಕಿನಲ್ಲಿ ತಾಲ್ಲೂಕುಮಟ್ಟದ ಅಧಿಕಾರಿಗಳು ಇಲ್ಲ. ತರಬೇತುದಾರರನ್ನು 114

ತಾಲ್ಲೂಕುಗಳಲ್ಲಿ ಈಗಾಗಲೇ ನೇಮಕ ಮಾಡಲಾಗಿದೆ. ಉಳಿದ ತಾಲ್ಲೂಕುಗಳಲ್ಲಿ ನೇಮಕ ಮಾಡಲಿಕ್ಕೆ ಮಂಜೂರಾತಿ ಸಿಕ್ಕಿದೆ, ಆ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು.

ಶ್ರೀ ಎನ್. ಸಂಪಂಗಿ:— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ಇವತ್ತು ತಾಲ್ಲೂಕು ಕ್ರೀಡಾಂಗಣಗಳನ್ನು ಎಲ್ಲಿಯೂ ಕೂಡ ಕಟ್ಟಲಿಲ್ಲ. ತರಬೇತಿದಾರರನ್ನು ಕ್ರೀಡಾಂಗಣಗಳನ್ನು ಪೂರ್ತಿ ಮಾಡಬೇಕು. 175 ತಾಲ್ಲೂಕಗಳಲ್ಲಿ ಕೇವಲ ಆರು ಕ್ರೀಡಾಂಗಣಗಳನ್ನು ಪೂರ್ತಿ ಮಾಡಿದ್ದೇವೆಂದು ಹೇಳುತ್ತಾರೆ. 83 ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಕಟ್ಟುವ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆಂದು ಹೇಳುತ್ತಾರೆ. ಇದಕ್ಕೆ ಹಣದ ಕೊರತೆಯಿದೆ. ಹಣವನ್ನು ಯಾವಾಗ ಕೊಡುತ್ತೀರಿ ಅಂದರೆ ಸಂಬಂಧಪಟ್ಟ ಲೋಕಸಭೆ ರಾಜ್ಯಸಭೆ ಸದಸ್ಯರುಗಳನ್ನು ಕೇಳಿಯೆಂದು ಹೇಳುತ್ತಾರೆ. ಇವತ್ತು ಲೋಕಸಭೆ ರಾಜ್ಯಸಭೆ ಸದಸ್ಯರುಗಳ ಹತ್ತಿರ ಹಣ ತೆಗೆದುಕೊಂಡು ಈ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದಾ? ಸರ್ಕಾರ ಏಕೆ ಸುಮ್ಮನೆ ಕುಳಿತಿದೆ? ರಾಜ್ಯಸಭೆ ಲೋಕಸಭೆ ಸದಸ್ಯರುಗಳಿಗೆ ಕೊಡತಕ್ಕ ಗ್ರಾಂಟುಗಳಲ್ಲಿ ಕನಿಷ್ಟಪಕ್ಷ ಒಬ್ಬೊಬ್ಬ ಸದಸ್ಯರುಗಳು 25 ಲಕ್ಷ ರೂ. ಕೊಟ್ಟು, ಬರತಕ್ಕ 25-30 ಕೋಟಿ ರೂಪಾಯಿಗಳಲ್ಲಿ ಕರ್ನಾಟಕ ರಾಜ್ಯದ ಯುವ ಕ್ರೀಡಾಪಟುಗಳಿಗೆ ಕ್ರೀಡಾಂಗಣ ಕಟ್ಟುವುದಕ್ಕೆ ಅವಕಾಶ ಮಾಡಬೇಕು. ಇದೊಂದು ಅವಕಾಶ, ಕ್ರೀಡಾಪಟುಗಳ ವಿಚಾರದಲ್ಲಿ ಸದನದಲ್ಲಿ ನಾವು ಯಾವತ್ತೂ ಚರ್ಚೆ ಮಾಡಿಲ್ಲ. ಕರ್ನಾಟಕದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಕ್ರೀಡಾಪಟುಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡತಕ್ಕ ಕೆಲಸವನ್ನು ಮಾಡುತ್ತಿಲ್ಲ.

ಅಧ್ಯಕ್ಷರು :— ತಾವು ಪ್ರಶ್ನೆ ಕೇಳಿ. ಭಾಷಣ ಮಾಡುತ್ತಿದ್ದೀರಿ.

ಶ್ರೀ ಎನ್. ಸಂಪಂಗಿ :— ಒಂದು ವಿಚಾರವನ್ನು ಕೇಳುವುದು ಇಷ್ಟೆ. 1995-96ರಲ್ಲಿ ನಡೆದಂತಹ ರಾಷ್ಟ್ರೀಯ ಕ್ರೀಡೆಗಳ ಹೆಸರಿನಲ್ಲಿ ಸುಮಾರು ಕೋಟಿ ರೂಪಾಯಿಗಳ ಅವ್ಯವಹಾರ ಮಾಡಿದಂತಹ ಅಧಿಕಾರಿಗಳ ಮೇಲೆ ನಾವು ಯಾವುದೇ ತರಹದ ಕ್ರಮವನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು :— ಭಾಷಣ ಮಾಡುತ್ತೀರಿ, ನೀವು ಪ್ರತ್ಯೇಕವಾಗಿ ಪ್ರಶ್ನೆ ಕೇಳಿ.

ಶ್ರೀ ಬಿ. ರಮಾನಾಥ ರೈ :— ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆ ಕೇಳಲಿ. ಪೂಜಾರಿಯವರ ಪ್ರಶ್ನೆಗೆ ಪೂರಕವಾಗಿ ನಾನು ಉತ್ತರ ಕೊಡುತ್ತೇನೆ.

ಶ್ರೀ ಎನ್. ಸಂಪಂಗಿ :— ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಅದಕ್ಕೋಸ್ಕರ ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :— ತಾವು ಬರೆದು ಕಳುಹಿಸಿ.

ಶ್ರೀ ಎನ್. ಸಂಪಂಗಿ :— ತಾವು ಯಾವತ್ತಾದರೂ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು :— ಆಯಿತು, ತೆಗೆದುಕೊಳ್ಳೋಣ. ಮಾನ್ಯ ಗೋಪಾಲ, ಬಂಡಾರಿಯವರು ತಾವು ಏನಾದರೂ ಕೇಳುವುದು ಇದ್ದರೆ ಕೇಳಿ.

ಶ್ರೀ ಹೆಚ್. ಗೋಪಾಲ ಭಂಡಾರಿ :— ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ಕೊಟ್ಟಹಾಗೆ ಎನ್‌ಡಿಎಸ್ ಇನ್‌ಸ್ಪೆಕ್ಟರ್ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಇದ್ದರು. ಎಲ್ಲರೂ ನಿವೃತ್ತಿಯಾಗಿ ಈಗ 11 ಜನ ಮಾತ್ರ ಉಳಿದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಹುದ್ದೆಗಳನ್ನು ಸೃಷ್ಟಿ ಮಾಡತಕ್ಕ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೇ ಎನ್ನುವುದು ಒಂದು. ಇನ್ನೊಂದು ಶಿಕ್ಷಣ ಇಲಾಖೆಯಿಂದ ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿಯೋಜನೆಯ ಆಧಾರದ ಮೇಲೆ ತುಂಬತಕ್ಕ ಪ್ರಯತ್ನ ಮಾಡಿದ್ದೇವೆಂದು ಹೇಳಿದ್ದಾರೆ. ಎಲ್ಲಾ ತಾಲ್ಲೂಕುಗಳಲ್ಲಿ ಯುವಜನ ಸೇವಾ ಇಲಾಖೆಯಲ್ಲಿ ಅನುದಾನ ಸ್ವಲ್ಪಮಟ್ಟಿಗೆ ಇದೆ. ಆದರೆ ಆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಿಕ್ಕೆ ಅಧಿಕಾರಿಗಳು ಇಲ್ಲ. ಶಿಕ್ಷಣ ಇಲಾಖೆಯಿಂದ ವಾರದಲ್ಲಿ ಎರಡು ದಿನ ನಿಯೋಜನೆ ಮಾಡಿದ್ದಾರೆ. ಆದರೆ ಅಧ್ಯಾಪಕರು ಅಲ್ಲಿ ಬಿಡುತ್ತಿಲ್ಲ. ಶಿಕ್ಷಣ ಸಂಸ್ಥೆಯಿಂದ ಅವರನ್ನು ಬಿಡುಗಡೆ ಮಾಡುತ್ತಿಲ್ಲ. ಹಣವನ್ನು ಖರ್ಚು ಮಾಡಲಿಕ್ಕೆ ಆಗುತ್ತಿಲ್ಲ. ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೆ? ಸರ್ಕಾರ ತರಬೇತುದಾರರನ್ನು ಎಲ್ಲಿ ಕ್ರೀಡಾಂಗಣ ಇದೆ ಅಲ್ಲಿಗೆ ಕಳುಹಿಸತಕ್ಕ ಪ್ರಯತ್ನವನ್ನು ಮಾಡಬೇಕೆಂದು ನನ್ನ ವಿನಂತಿ.

ಶ್ರೀ ಬಿ. ರಮಾನಾಥ ರೈ :— ಮಾನ್ಯ ಅಧ್ಯಕ್ಷರೆ, ಪ್ರತಿ ತಾಲ್ಲೂಕಿನಲ್ಲೂ ದೈಹಿಕ ಶಿಕ್ಷಕರು ತಾತ್ಕಾಲಿಕವಾಗಿ ನಿಯೋಜನೆಯ ಮೇಲೆ ಕೆಲಸ ಮಾಡುತ್ತಾರೆ. ಅದು ಜಿಲ್ಲಾಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ. ಆ ವ್ಯವಹಾರವನ್ನು ಅವರು ನೋಡಿಕೊಳ್ಳುತ್ತಾರೆ. ತಾಲ್ಲೂಕುಮಟ್ಟದ ಅಧಿಕಾರಿಗಳಿಗೆ ಬದಲಾಗಿ ಅವರು ಆ ಕೆಲಸವನ್ನು ಮಾಡಿಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಪ್ರತಿ ತಾಲ್ಲೂಕಿನಲ್ಲಿ ಯುವಜನ ಸೇವಾ ಅಧಿಕಾರಿಗಳು ಬೇಕೆನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ ತಾಲ್ಲೂಕುಮಟ್ಟದ ಅಧಿಕಾರಿಗಳನ್ನು

ನೇಮಕ ಮಾಡಬೇಕೆನ್ನುವ ಪ್ರಸ್ತಾವ ಸರ್ಕಾರದ ಮುಂದಿದೆ. ಇನ್ನೊಂದು ಏನೆಂದರೆ ತರಬೇತಿದಾರರು ಕೆಲವು ತಾಲ್ಲೂಕುಗಳಲ್ಲಿ ಇದ್ದಾರೆ, ಮತ್ತು ಕೆಲವು ತಾಲ್ಲೂಕುಗಳಲ್ಲಿ ಇಲ್ಲ. ಇವತ್ತು ಹೇಳಿದ್ದೇವೆ...

ಶ್ರೀ ಹೆಚ್. ಗೋಪಾಲ ಭಂಡಾರಿ :— ಇದ್ದಾರೆ. ಕ್ರೀಡಾಂಗಣ ಇದ್ದಲ್ಲಿ ಕೊಡಲಿ ಎಂದು ನಾನು ಹೇಳಿದ್ದು.

ಶ್ರೀ ಬಿ. ರಮಾನಾಥ ರೈ:— ಇಲ್ಲದಿದ್ದಲ್ಲಿ, ಅದನ್ನು ಸಂಬಂಧಪಟ್ಟ ಸಚಿವರಿಗೆ ಮನದಟ್ಟು ಮಾಡಿಕೊಡುತ್ತೇನೆ.

ರಾಜ್ಯದಲ್ಲಿ ತ್ವರಿತ ನ್ಯಾಯಾಲಯಗಳ ಸ್ಥಾಪನೆ.

252(2080) ಶ್ರೀ ರಾಮಲಿಂಗರೆಡ್ಡಿ (ಜಯನಗರ):— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ತ್ವರಿತ (ಫಾಸ್ಟ್ ಟ್ರ್ಯಾಕ್ ಕೋರ್ಟ್ಸ್) ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಸುಮಾರು, 10 ವರ್ಷಕ್ಕೂ ಮಿಕ್ಕಿ ಉಳಿದಿರುವ ವಿವಿಧ ಬಗೆಯ ದಾವೆಗಳನ್ನು ಇತ್ಯರ್ಥಗೊಳಿಸಲು ತ್ವರಿತ ನ್ಯಾಯಾಲಯಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):—

ಅ) ಸರ್ಕಾರದ ಆದೇಶ ಸಂಖ್ಯೆ: ಲಾ 369 ಎಲ್‌ಎಎಂ 2000 ದಿನಾಂಕ: 29-5-2001 ರಲ್ಲಿ ರೂ. 1,13,20,000-00 ವೆಚ್ಚದಲ್ಲಿ 13 ಫಾಸ್ಟ್ ಟ್ರ್ಯಾಕ್ಟ್ ನ್ಯಾಯಾಲಯಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆ. ಈ ಎಲ್ಲಾ ನ್ಯಾಯಾಲಯಗಳು ಸದರಿ ನ್ಯಾಯಾಲಯಗಳಿಗೆ ಗೌರವಾನ್ವಿತ ನ್ಯಾಯಾಧೀಶರುಗಳನ್ನು ನೇಮಕ ಮಾಡಿದ ದಿನಾಂಕದಿಂದ ಕಾರ್ಯನಿರತವಾಗಿರುತ್ತವೆ. ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯ ಹಾಗೂ 150 ಫಾಸ್ಟ್ ಟ್ರ್ಯಾಕ್ಟ್ ನ್ಯಾಯಾಲಯಗಳನ್ನು ಸದರಿ ನ್ಯಾಯಾಲಯಗಳಿಗೆ, ನ್ಯಾಯಾಲಯ ಕಟ್ಟಡಗಳನ್ನು ನಿರ್ಮಿಸಲು ಸ್ಥಳಾವಕಾಶ ದೊರೆಯುವ ಆಧಾರದ ಮೇಲೆ ಹಂತ ಹಂತವಾಗಿ ಸ್ಥಾಪಿಸಲಾಗುವುದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ:— ಮಾನ್ಯ ಸಭಾಧ್ಯಕ್ಷರೇ, ಈಗ 13 ತ್ವರಿತ ನ್ಯಾಯಾಲಯಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ಇನ್ನು 150 ಕೋರ್ಟುಗಳನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದೀರಲ್ಲಾ, ಇದನ್ನು ಯಾವಾಗ ಮಾಡುತ್ತೀರಿ? ಈಗ ಒಟ್ಟು ಎಷ್ಟು ಕೇಸುಗಳು ಪೆಂಡಿಂಗ್ ಇವೆ? ಈ ಎಲ್ಲಾ ಕೋರ್ಟುಗಳು